ಬುದ್ಧ ಮರಳಿ ತಾಯ್ನಾಡಿಗೆ

ಸ್ವಾಮಿ ರಾಘವೇಶಾನಂದ

(ಹಿಂದಿನ ಸಂಚಿಕೆಯಿಂದ)

ರಾಹುಲನು ತಲೆಬೋಳಿಸಿಕೊಂಡು ಭಿಕ್ಷುವಿನ ವೇಷ ಧರಿಸಿರುವ ವಾರ್ತೆ ಅರಮನೆಯನ್ನು ತಲುಪಿತು. ಇದರಿಂದಾಗಿ ರಾಜ ಶುದ್ಧೋಧನನ ಹೃದಯ ಒಡೆದಂತಾಯಿತು. ರಾಜ ರಾಣಿಯರಿಬ್ಬರೂ ರಾಹುಲನಿಲ್ಲದೆ ತಾವು ಬದುಕಲು ಸಾಧ್ಯವಿಲ್ಲ ಎಂದು ಗೋಳಾಡಿದರು. ರಾಹುಲನಿಗೆ ತಂದೆಯ ಪ್ರೀತಿ ಸಿಕ್ಕಿರಲಿಲ್ಲ. ಆದ್ದರಿಂದ ಕೆಲವು ದಿನಗಳ ಕಾಲ ಅವನು ತಂದೆಯೊಡನಿದ್ದು ಹಿಂದಿರುಗುವನೆಂದು ಅವರೆಲ್ಲರೂ ಅಂದುಕೊಂಡಿದ್ದರು. ಆದರೆ ರಾಹುಲ ಭಿಕ್ಷುವಾಗಿಬಿಡುವನೆಂದು ಅವರು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಮೊಮ್ಮಗನಿಲ್ಲದ ಏಕಾಂಗಿತನ ರಾಜರಾಣಿಯರನ್ನು ಬಾಧಿಸಿತು. ಯಶೋಧರೆಗಾದರೋ ವಿಸ್ಮಯ, ಸಂತೋಷ, ದುಃಖ – ಇವೆಲ್ಲವೂ ಒಮ್ಮೆಗೇ ಉಂಟಾಯಿತು.

ಒಂದು ದಿನ ಮಧ್ಯಾಹ್ನದ ಸಮಯದಂದು ರಾಜ ಶುದ್ಧೋಧನ ಬುದ್ಧನ ವಿಹಾರಕ್ಕೆ ಭೇಟಿನೀಡಲು ಹೊರಟನು. ರಾಣಿ ಮತ್ತು ಯಶೋಧರೆಯರಿಬ್ಬರೂ ಅವನ ರಥವನ್ನೇರಿದರು. ಬುದ್ಧ ಅವರನ್ನು ಸಂತೋಷದಿಂದ ಸ್ವಾಗತಿಸಿದನು. ತನ್ನ ಹೊಸ ವೇಷವನ್ನು ಅವರಿಗೆಲ್ಲ ತೋರಿಸಲು ರಾಹುಲನಿಗೆ ಆನಂದವೋ ಆನಂದ. ಅವನು ಅತಿ ಉತ್ಸಾಹದಿಂದ ತಾಯಿಯೆಡೆಗೆ ಓಡಿದನು. ಯಶೋಧರೆ ತನ್ನ ಮಗನನ್ನು ಗಾಢವಾಗಿ ಅಪ್ಪಿಕೊಂಡಳು. ಅನಂತರ ರಾಹುಲನು ತನ್ನ ಅಜ್ಜಅಜ್ಜಿಯರ ತೊಡೆಯನ್ನು ಏರಿದನು. ಅವರಿಬ್ಬರ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿತ್ತು.

ಶುದ್ಧೋಧನನು ಬುದ್ಧನಿಗೆ ಬಾಗಿ ವಂದಿಸಿದನು. ಬಳಿಕ ಆಕ್ಷೇಪಿಸುವ ಧ್ವನಿಯಲ್ಲಿ ಹೀಗೆ ಹೇಳಿದನು: "ಮಗನೇ, ನೀನು ಮನೆ ಬಿಟ್ಟು ಹೋದಾಗ ಅತೀವ ದುಃಖವನ್ನು ಅನುಭವಿಸಿದೆ. ಕೆಲವು ದಿನಗಳ ಹಿಂದೆ ನೀನು ನಂದನನ್ನೂ ನಿನ್ನ ವಿಹಾರಕ್ಕೆ ಕರೆದುಕೊಂಡುಬಿಟ್ಟೆ, ಈಗ ರಾಹುಲನನ್ನೂ ನೀನು ಕರೆದುಕೊಂಡುಬಿಟ್ಟರೆ, ನನ್ನಿಂದ ಬದುಕಲು ಸಾಧ್ಯವಾಗದು. ಗೃಹಸ್ಥನಾದ ನನಗೆ ತಂದೆ–ಮಕ್ಕಳ ಹಾಗೂ ತಾತ–ಮೊಮ್ಮಕ್ಕಳ ಬಾಂಧವ್ಯ ಬಹಳ ಅಮೂಲ್ಯವಾದುದು.

"ನೀನು ನನ್ನನ್ನು ಬಿಟ್ಟು ಹೊರಟುಹೋದಾಗ ನನ್ನ ಮೈಯೊಳಗೆ ಕತ್ತಿಯಾಡಿಸಿದಂತಾಯಿತು. ಆ ಕತ್ತಿ ನನ್ನ ಮೇಲು ಚರ್ಮವನ್ನು ಕತ್ತರಿಸಿಹಾಕಿದೆ. ಈಗ ನನ್ನ ಇನ್ನೊಬ್ಬ ಮಗ ಹಾಗೂ ಮೊಮ್ಮಗನನ್ನು ಕಳೆದುಕೊಂಡು, ಈ ಕತ್ತಿ ನನ್ನ ಮಾಂಸಖಂಡ ಹಾಗೂ ಮೂಳೆಗಳನ್ನೇ ಕತ್ತರಿಸಿದಂತಾಗಿದೆ. ನಿನ್ನ ಈ ತೀರ್ಮಾನವನ್ನು ಮತ್ತೆ ಪರಿಶೀಲಿಸುವಂತೆ ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ದಯವಿಟ್ಟು ಇನ್ನು ಮುಂದೆ, ತಂದೆತಾಯಿಯರ ಅಪ್ಪಣೆಯಿಲ್ಲದೆ ಯಾವ ಮಕ್ಕಳಿಗೂ ದೀಕ್ಷೆಯನ್ನು ಕೊಡಬೇಡ."

ಬುದ್ಧ ಸ್ವಲ್ಪಕಾಲ ಶಾಂತವಾಗಿ ತಂದೆಯ ಮಾತುಗಳನ್ನು ಕುರಿತು ದೀರ್ಘವಾಗಿ ಆಲೋಚಿಸಿದನು. ಮೊದಲು ಅವರನ್ನು ಸಮಾಧಾನಗೊಳಿಸಬೇಕಾಗಿತ್ತು. ಆದ್ದರಿಂದ ಅವನು ತನ್ನ ತಂದೆ, ತಾಯಿ ಹಾಗೂ ರಾಣಿಯರಿಗೆ ಪ್ರಪಂಚದ ನಶ್ವರತೆ ಮತ್ತು ಜೀವನದ ನಿಜವಾದ ಉದ್ದೇಶದ ಬಗ್ಗೆ ತಿಳಿಹೇಳಿದ. ಈ ಉಪದೇಶವನ್ನು ಮಾಡುವಾಗ, "ಇದು ನಿನಗೂ ಅನ್ವಯಿಸುತ್ತದೆ" ಎನ್ನುವಂತೆ ಯಶೋಧರೆಯ ಕಡೆಯೂ ದೃಷ್ಟಿಹಾಯಿಸುತ್ತಿದ್ದ. ಆಕೆಯು ಎಲ್ಲವನ್ನೂ ಅರ್ಥಮಾಡಿಕೊಂಡ ಜ್ಞಾನಿಯಂತೆ ನಿರ್ವಿಕಾರಚಿತ್ತದಿಂದ ಕುಳಿತುಕೊಂಡಿದ್ದಳು. ದಿನವೂ ಮನಸ್ಸನ್ನು ಎಚ್ಚರದಿಂದ ಇಡುವ ಅಭ್ಯಾಸ ಮಾಡಿಸುವ ಮೂಲಕ ಎಲ್ಲ ಕಷ್ಟಗಳಿಂದಲೂ ಪಾರಾಗಬಹುದೆಂದು ಬುದ್ಧನು ರಾಜ ಶುದ್ಧೋಧನಿಗೆ ಉಪದೇಶ ಮಾಡಿದನು. ನಂದ ಮತ್ತು ರಾಹುಲರಿಗೆ ಇಂಥ ಪವಿತ್ರ ಜೀವನವನ್ನು ನಡೆಸುವ ಅವಕಾಶ ದೊರಕಿರುವುದಕ್ಕೆ ರಾಜನು ಹೆಮ್ಮೆಪಡಬೇಕೆಂದು ಬುದ್ಧ ಹೇಳಿದನು. ಆತನ ಮಾತುಗಳಿಂದ ರಾಜ ಮತ್ತು ರಾಣಿಯರಿಬ್ಬರ ಹೃದಯಗಳು ಹಗುರವಾದವು. ರಾಜನಿಗೆ ಸಮಾಧಾನವಾಗಲೆಂದು ಸಾರಿಪುತ್ತನನ್ನು ಕರೆದು ಹೀಗೆ ಹೇಳಿದ : "ಇಂದಿನಿಂದ ಬಾಲಕರನ್ನು ಅವರ ತಂದೆತಾಯಿಯರ ಅನುಮತಿಯಿಲ್ಲದೆ ಭಿಕ್ಷುಗಳ ಸಂಘಕ್ಕೆ ಸೇರಿಸಿಕೊಳ್ಳುವುದು ಬೇಡ. ಇದನ್ನು ನಮ್ಮ ಬೌದ್ಧವಿಹಾರದ ನಿಯಮಗಳಲ್ಲಿ ಒಂದನ್ನಾಗಿ ಸೇರಿಸು." ಬಂದಿದ್ದ ರಾಜಮನೆತನದವರೆಲ್ಲರೂ ಭಾರವಾದ ಮನಸ್ಸಿನಿಂದ ರಾಜಧಾನಿಗೆ ಹಿಂದಿರುಗಿದರು.

ಕಾಲ ಬಹುಬೇಗ ಓಡಿತು. ಬುದ್ಧ ತನ್ನ ಶಿಷ್ಯರೊಂದಿಗೆ ಕಪಿಲವಸ್ತುವಿನಲ್ಲಿ ಆರು ತಿಂಗಳಿಗಿಂತಲೂ ಹೆಚ್ಚಾಗಿ ನೆಲೆಸಿದ್ದನು. ಸುಮಾರು ಐನೂರಕ್ಕೂ ಹೆಚ್ಚು ಜನರು ಭಿಕ್ಷುಜೀವನವನ್ನು ಸ್ವೀಕರಿಸಿ ಅವನ ಶಿಷ್ಯರಾದರು. ಆತನ ಧರ್ಮವನ್ನು ಪಾಲಿಸಲು ಮುಂದೆ ಬಂದ ಗೃಹಸ್ಥರ ಸಂಖ್ಯೆಯಂತೂ ಅಪಾರವಾಗಿತ್ತು. ತಾನು ಹಿಂದೆ ಬಿಂಬಸಾರನಿಗೆ ಕೊಟ್ಟ ಮಾತಿನಂತೆ, ಬುದ್ಧನು ಮಳೆಗಾಲದ ಆಶ್ರಯಕ್ಕೆ ಬಿದಿರಿನ ವನಕ್ಕೆ ಮರಳಲು ಇಚ್ಛಿಸಿದನು.

ಬುದ್ಧನು ಹೊರಡುವುದಕ್ಕೆ ಮುಂಚೆ, ಶಾಕ್ಯ ರಾಜ ಮನೆತನದವರ ಮತ್ತು ಕುಟುಂಬದವರ ಜೊತೆಗೆ ಭೋಜನಕ್ಕೆ ಬರಲು ಅವನನ್ನು ರಾಜ ಶುದ್ಧೋಧನನು ಆಹ್ವಾನಿಸಿದನು.

ಹಾಗೆಯೇ ಅವರಿಗೆಲ್ಲ ಪ್ರವಚನವನ್ನು ನೀಡಲು ಕೇಳಿಕೊಂಡನು. ಈ ಸಂದರ್ಭವನ್ನು ಬುದ್ಧನು, ಜ್ಞಾನಮಾರ್ಗವನ್ನು ರಾಜಕೀಯದಲ್ಲಿ ಹೇಗೆ ಅನುಸರಿಸಬಹುದು ಎಂದು ತಿಳಿಸಲು ಉಪಯೋಗಿಸಿಕೊಂಡನು. ಅವನು ಎಲ್ಲರನ್ನೂ ಸಂಬೋಧಿಸುತ್ತ ಹೀಗೆ ಹೇಳಿದನು: "ಧರ್ಮದ, ಜ್ಞಾನದ ಮಾರ್ಗವನ್ನು ಅನುಸರಿಸಿದರೆ ಅದು ರಾಜಕೀಯವನ್ನೂ ಬೆಳಗಬಲ್ಲುದು. ಹಾಗೆಯೇ ಅದು ಆಡಳಿತಗಾರರಿಗೆ, ಸಾಮಾಜಿಕ ಸಮಾನತೆ ಮತ್ತು ನ್ಯಾಯವು ದೊರೆಯುವಂತೆ ಮಾಡಲು ಸಹಾಯಮಾಡುತ್ತದೆ. ನೀವು ಜ್ಞಾನಮಾರ್ಗದ ಸಾಧನೆಯಲ್ಲಿ ತೊಡಗಿದರೆ ಅದು ನಿಮ್ಮ ರಾಜಕೀಯ ವಲಯವನ್ನು ಪ್ರಕಾಶಗೊಳಿಸುತ್ತದೆ. ಹಾಗೆಯೇ ಸುತ್ತಲಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ ನಿಮ್ಮ ಪ್ರಜ್ಞಾಶಕ್ತಿಯನ್ನೂ ಹೆಚ್ಚಿಸುತ್ತದೆ. ಇದರಿಂದ ದಯೆಯ ಸ್ವಭಾವ ಹಾಗೂ ಪ್ರಜೆಗಳ ಸೇವೆಯನ್ನು ಮಾಡಬೇಕೆಂಬ ಹಂಬಲ ಹೆಚ್ಚಾಗುತ್ತದೆ. ಈ ಕಾರಣದಿಂದ ನೀವು ಹಿಂಸೆಯಿಲ್ಲದೆ, ಶಾಂತಿ ಮತ್ತು ಸಂತೋಷ ವನ್ನು ನಿಮ್ಮ ಜೀವನದಲ್ಲಿ ತಂದುಕೊಳ್ಳುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತೀರಿ. ಆಗ ನೀವು ಮರಣದಂಡನೆ, ಚಿತ್ರಹಿಂಸೆ ಅಥವಾ ಸೆರೆವಾಸ, ಆಸ್ತಿಯ ಮುಟ್ಟುಗೋಲು – ಇಂಥ ಕೃತ್ಯಗಳಲ್ಲಿ ತೊಡಗಬೇಕಾಗಿಬರುವುದಿಲ್ಲ. ಇದು ಅಸಾಧ್ಯವಾದ ಆದರ್ಶವೇನಲ್ಲ, ಖಂಡಿತ ಸಾಧಿಸಬಹುದಾದದ್ದು."

ಬುದ್ಧ ಮುಂದುವರೆಸಿದ: "ರಾಜಕಾರಣಿಯು ಸಾಕಷ್ಟು ಜ್ಞಾನ ಮತ್ತು ಪ್ರೀತಿಯನ್ನು ಹೊಂದಿರಬೇಕು. ಆಗಮಾತ್ರ ಅವನು ಬಡತನ, ನೋವು ಮತ್ತು ದಬ್ಬಾಳಿಕೆಯ ಕ್ರೂರತೆ ಯನ್ನು ಅರ್ಥಮಾಡಿಕೊಳ್ಳಬಲ್ಲ. ಅಂಥವನು ಮಾತ್ರವೇ ಸಿರಿವಂತರ ಮತ್ತು ಬಡವರ ಮಧ್ಯೆ ಇರುವ ಅಂತರವನ್ನು ಹೋಗಲಾಡಿಸಬಲ್ಲ."

ಬಳಿಕ ಬುದ್ಧ ರಾಜಕಾರಣಿಗಳೆಲ್ಲರಿಗೂ ಹೀಗೆ ಕರೆ ನೀಡಿದನು: "ರಾಜಕಾರಣಿಗಳೇ, ನೀವು ಮಾದರಿ ಆಡಳಿತಗಾರರಾಗಿ ಬಾಳ ಬೇಕು. ಐಷಾರಾಮಿ ಜೀವನ ನಡೆಸಬೇಡಿ. ಅದು ನಿಮ್ಮ ಮತ್ತು ಪ್ರಜೆಗಳ ನಡುವೆ ಕಂದಕವನ್ನು ಏರ್ಪಡಿಸುತ್ತದೆ. ಭೋಗ ಸುಖದಲ್ಲಿ ಮುಳುಗದೆ, ಸರಳ ಹಾಗೂ ಸಂತೃಪ್ತ ಜೀವನವನ್ನು ನಡೆಸಿ. ನಿಮ್ಮ ಸಮಯವನ್ನೆಲ್ಲ ಜನಸೇವೆಯಲ್ಲಿ ಕಳೆಯಿರಿ. ನಾಯಕನು ತಾನು ಸ್ವತಃ ಆದರ್ಶವಾಗದೆ, ಜನರ ಮನ್ನಣೆಗೆ ಪಾತ್ರನಾಗಲಾರನು. ನೀವು ಜನರನ್ನು ಪ್ರೀತಿಸಿ ಗೌರವಿಸಿದರೆ, ಅವರು ನಿಮ್ಮನ್ನು ಪ್ರೀತಿಸಿ ಗೌರವಿಸುತ್ತಾರೆ. ಜನರನ್ನು ನೀವು ನಿಮ್ಮ ಸದ್ಗುಣಗಳಿಂದ ಗೆಲ್ಲಬೇಕೇ ಹೊರತು, ಕಾನೂನು ಕಟ್ಟಳೆಗಳಿಂದಲ್ಲ. ಜ್ಞಾನಮಾರ್ಗದಲ್ಲಿ ನಡೆದಾಗ ನೀವು ಪಡೆಯುವ ಆನಂದವು ನಿಮ್ಮ ಸದ್ಗುಣಗಳಿಂದ ಮಾತ್ರವೇ ದೊರೆಯುವುದು."

ರಾಜ ಶುದ್ಧೋಧನ ಮತ್ತು ಅಲ್ಲಿ ನೆರೆದಿದ್ದವರೆಲ್ಲರೂ ಬುದ್ಧನ ಮಾತುಗಳನ್ನು ಶ್ರದ್ಧೆಯಿಂದ ಆಲಿಸಿದರು. ಬುದ್ಧನ ಚಿಕ್ಕಪ್ಪನೂ, ದೇವದತ್ತ ಮತ್ತು ಆನಂದರ ತಂದೆಯೂ ಆದ ದ್ರೋಣೋದನ ಮಹಾರಾಜನು ಬುದ್ಧನನ್ನು ಕುರಿತು ಹೀಗೆ ಹೇಳಿದನು: "ಸದ್ಗುಣಗಳಿಂದ ರಾಜ್ಯವನ್ನು ಆಳುವುದು ನೀವು ವರ್ಣಿಸಿದಂತೆ ಒಂದು ಸುಂದರ ಮಾರ್ಗವಾಗಿದೆ. ಅಂತಹ ಗುಣಗಳನ್ನು ಹೊಂದಿದವರು, ಆ ಸಾಮರ್ಥ್ಯವುಳ್ಳವರು ನೀವೇ ಆಗಿದ್ದೀರಿ. ಆದುದರಿಂದ ನೀವೇಕೆ ಕಪಿಲವಸ್ತುವಿನಲ್ಲಿಯೇ ಇದ್ದುಕೊಂಡು, ಶಾಕ್ಯರಾಜ್ಯದಲ್ಲಿ ನೂತನ ರೀತಿಯ ರಾಜ್ಯಭಾರ ವನ್ನು ಮಾಡಬಾರದು? ಆ ಮೂಲಕ ಇಲ್ಲಿನ ಪ್ರಜೆಗಳಿಗೆ ಶಾಂತಿ, ಆನಂದ ಮತ್ತು ಉತ್ಸಾಹಗಳನ್ನು ಏತಕ್ಕೆ ತಾನೇ ತರ ಬಾರದು?"

ಶುದ್ಧೋಧನನು ಈ ಮಾತನ್ನು ಮೆಚ್ಚಿದನು. ತಾನೂ ಹೀಗೆ ಧ್ವನಿಗೂಡಿಸಿದನು: "ಮಗನೇ, ನನಗೂ ವೃದ್ಧಾಪ್ಯ ಬಂದಿದೆ. ನೀನು ಒಪ್ಪಿಕೊಂಡಲ್ಲಿ ನಾನು ಸಂತೋಷದಿಂದ ಸಿಂಹಾಸನವನ್ನು ತ್ಯಜಿಸುತ್ತೇನೆ; ಅದರ ಮೇಲೆ ನಿನ್ನನ್ನು ಕೂಡಿಸುತ್ತೇನೆ. ನಿನ್ನ ಸದ್ಗುಣಗಳು, ಪ್ರಾಮಾಣಿಕತೆ ಮತ್ತು ಬುದ್ಧಿವಂತಿಕೆಯಿಂದ ಖಂಡಿತವಾಗಿಯೂ ನಮ್ಮ ಪ್ರಜೆಗಳನ್ನು ನೀನು ಸುಖಿಯಾಗಿರಿಸಬಲ್ಲೆ. ಪ್ರಜೆಗಳು ಕೂಡ ಖಂಡಿತವಾಗಿ ನಿನ್ನನ್ನು ಬೆಂಬಲಿಸುತ್ತಾರೆ. ಕೆಲಕಾಲದಲ್ಲಿಯೇ ನಮ್ಮ ದೇಶವು ಹಿಂದೆಂದೂ ಆಗಿರದಷ್ಟು ಪ್ರಗತಿಯನ್ನು ಖಂಡಿತ ಸಾಧಿಸುತ್ತದೆ. ದಯವಿಟ್ಟು ಇದಕ್ಕೆ ಸಮ್ಮತಿಸು."

ಬುದ್ಧನು ನಸುನಕ್ಕು ಕ್ಷಣಕಾಲ ಸುಮ್ಮನಾದನು. ಅನಂತರ ತಂದೆಯನ್ನು ನೋಡುತ್ತ ಹೀಗೆ ಹೇಳಿದನು: "ತಂದೆಯೇ, ನಾನು ಈಗ ಒಂದು ಕುಟುಂಬ, ಒಂದು ಕುಲ ಅಥವಾ ಒಂದು ದೇಶಕ್ಕೆ ಸೇರಿದವನಲ್ಲ. ಈ ಭೂಮಿಯ ಮೇಲೆ ಇರುವ ಎಲ್ಲ ಜೀವಿಗಳೂ ನನ್ನ ವಿಶಾಲ ಕುಟುಂಬಕ್ಕೆ ಸೇರಿದವ ರಾಗಿದ್ದಾರೆ. ಭೂಮಿಯೇ ನನ್ನ ಮನೆಯಾಗಿದೆ. ಬೇರೆಯವರ ಉದಾರತನದಿಂದ ಬದುಕುವ 'ಸಂನ್ಯಾಸಿ ಧರ್ಮ' ನನ್ನದು. ನಾನು ಈ ಮಾರ್ಗವನ್ನು ಸ್ವೇಚ್ಛೆಯಿಂದ ಆರಿಸಿಕೊಂಡಿದ್ದೇನೆ. ನಾನು ರಾಜಕೀಯ ಮಾರ್ಗವನ್ನು ಆರಿಸಿಕೊಂಡಿಲ್ಲ. ನಾನು ಈ ರೀತಿಯಾಗಿ ಎಲ್ಲರ ಸೇವೆಯನ್ನು ಮಾಡಬಲ್ಲೆ ಮಾತ್ರವಲ್ಲ, ಈ ಮೂಲಕವಾಗಿಯೇ ಎಲ್ಲರ ಮನಸ್ಸನ್ನೂ ಗೆಲ್ಲಬಲ್ಲೆ ಎನ್ನುವ ನಂಬಿಕೆ ನನಗಿದೆ."

ರಾಣಿ ಗೌತಮಿ ಹಾಗೂ ಯಶೋಧರೆ ಆ ಸಮಯದಲ್ಲಿ ಯಾವುದೇ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ. ಆದರೂ, ಬುದ್ಧನ ಮಾತುಗಳಲ್ಲಿ ಸತ್ಯವಿದೆ ಎಂದು ಅರಿತು ಕೊಂಡರು. ಬುದ್ಧನು ಬರಿಯ ಕಪಿಲವಸ್ತುವನ್ನು ಮಾತ್ರ ಆಳುವ ವ್ಯಕ್ತಿಯಲ್ಲ; ಅದಕ್ಕೆ ಬದಲಾಗಿ ಇಡೀ ಭೂಮಂಡಲ ವನ್ನೇ ಆಳಬಲ್ಲ ಮಹಾನ್ ವ್ಯಕ್ತಿ ಎನ್ನುವುದನ್ನು ಅವರು ಅರ್ಥ ಮಾಡಿಕೊಂಡರು.

ಬುದ್ಧನ ಅಗಲಿಕೆಯಿಂದ ಉಂಟಾದ ಭಾರವಾದ ಮನಸ್ಸಿನಿಂದ ಎಲ್ಲರೂ ಹೊರಡಲು ಮೇಲೆದ್ದರು. ತಾನೀಗ ಮಗಧದೇಶಕ್ಕೆ ಹೊರಡುತ್ತಿದ್ದರೂ, ಮತ್ತೊಮ್ಮೆ ಕಪಿಲವಸ್ತುವಿಗೆ ಖಂಡಿತ ಬರುವುದಾಗಿ ಬುದ್ಧನು ಆಶ್ವಾಸನೆಯನ್ನಿತ್ತನು. ಈ ಆಶ್ವಾಸನೆಯಿಂದ, ಅಲ್ಲಿ ನೆರೆದಿದ್ದವರ ಮುಖದಲ್ಲಿ ಮತ್ತೊಮ್ಮೆ ಸಂತೋಷದ ಭಾವ ಉಕ್ಕಿತು.